# ಶ್ರೀಮಾತೆಯವರ ನೆನಪುಗಳು

ಇಂಗ್ಲಿಷ್ ಮೂಲ : **ಕುಮುದ ಬಂಧು ಸೇನ್**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ – ೨**

೧೮೯೭ರ ಏಪ್ರಿಲ್ ತಿಂಗಳಲ್ಲಿ ಶ್ರೀಮಾತೆಯವರು ಕಲ್ಕತ್ತೆಗೆ ಬಂದು, ಅಲ್ಲಿ ಸ್ವಲ್ಪ ಕಾಲ ತಂಗಿದ್ದರು. ಗಂಗಾನದಿಗೆ ಸಮೀಪದಲ್ಲಿ, ಬಾಗ್‌ಬಜಾರಿನಲ್ಲಿ ಒಂದು ಬಾಡಿಗೆ ಮನೆಯಲ್ಲಿ ತಂಗಲು ಅವರಿಗೆ ವ್ಯವಸ್ಥೆ ಮಾಡಲಾಗಿತ್ತು.

ಸ್ವಾಮಿ ಯೋಗಾನಂದರು ಅವರ ಸುಖಸೌಕರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಅವರೊಂದಿಗೆ ದೀನ ಮಹಾರಾಜ್ ಹಾಗೂ ಕೃಷ್ಣಲಾಲ್ ಸಾಮಾನು ಖರೀದಿಸುವುದು ಮೊದಲಾದ ಇತರ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು. ಇವರಲ್ಲಿ ಕೃಷ್ಣಲಾಲ್ ಸಂನ್ಯಾಸ ಜೀವನ ನಡೆಸಲು ಬಯಸಿದ್ದರು. ಈ ಸಂದರ್ಭದಲ್ಲಿ , ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಿಂದ ಹಿಂದಿರುಗಿ, ಆರೋಗ್ಯ ನಿಮಿತ್ತ ಹವಾ ಬದಲಾವಣೆಗಾಗಿ ಪ್ರಸಿದ್ಧ ಪರ್ವತ ಪ್ರದೇಶವಾದ ದಾರ್ಜಿಲಿಂಗ್‌ಗೆ ಹೋಗಿದ್ದರು ಎಂಬುದು ಗಮನಿಸಬೇಕಾದ ಸಂಗತಿ. ಅವರು ಭಾರತಕ್ಕೆ ಮರಳಿ ಬಂದ ಮೇಲೆ ಸಾಕಷ್ಟು ಒತ್ತಡಗಳಿಗೆ ಒಳಗಾಗಿದ್ದರು. ಸಂದರ್ಶನಗಳಲ್ಲಿ ಭಾಗವಹಿಸುವುದು, ನೂರಾರು ಜನರೊಂದಿಗೆ ಮಾತುಕತೆ, ಹಲವರ ಸ್ವಾಗತವನ್ನು ಸ್ವೀಕರಿಸುವುದು, ಕೊಲಂಬೋದಿಂದ ಕಲ್ಕತ್ತದವರೆಗೂ ಹಲವು ಪ್ರದೇಶಗಳಲ್ಲಿ ನಿಂತು ನಿಂತು, ಉದ್ದಕ್ಕೂ ಭಾಷಣ ಮಾಡುವುದು — ಇತ್ಯಾದಿ. ಶ್ರೀರಾಮಕೃಷ್ಣರ ಜಯಂತಿ ಆಚರಣೆ ಮುಗಿದ ಕೂಡಲೇ ಅವರು ಕೆಲವು ಮಂದಿ ಗುರುಭಾಯಿಗಳೊಂದಿಗೆ ಹಾಗೂ ಯುವ ಶಿಷ್ಯಂದಿರೊಂದಿಗೆ ದಾರ್ಜಿಲಿಂಗ್‌ಗೆ ಹೊರಟರು. ಆಗ ಶ್ರೀಮಾತೆಯವರು ತಮ್ಮ ಸ್ವಂತ ಗ್ರಾಮವಾದ ಜಯರಾಮಬಾಟಿಯಲ್ಲಿದ್ದರು.

ಶ್ರೀಮಾತೆಯವರು ಕಲ್ಕತ್ತೆಗೆ ಬಂದಾಗ, ಸ್ವಾಮಿ ವಿವೇಕಾನಂದರು ತಮ್ಮ ಪ್ರಿಯ ಶಿಷ್ಯರಾದ ಖೇತ್ರಿಯ(ರಜಪುತಾನ) ರಾಜಾ ಅಜಿತ್ ಸಿಂಗ್ ನನ್ನು ಭೇಟಿಯಾಗಲು ಕಲ್ಕತ್ತೆಗೆ ಬರಬೇಕಾಯಿತು. ಮಹಾರಾಜನು ತನ್ನ ಕೆಲವು ಮಂದಿ ರಾಜಪ್ರಮುಖರೊಂದಿಗೆ ಕಲ್ಕತ್ತೆಗೆ ಬಂದಿದ್ದನು. ಅವರೆಲ್ಲರೂ ವಿಕ್ಟೋರಿಯಾ ರಾಣಿಯ ಆಳ್ವಿಕೆಯ ವಜ್ರಮಹೋತ್ಸವಕ್ಕೆ ಆಹ್ವಾನಿತರಾಗಿದ್ದರು. ಅದಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವರು ಲಂಡನ್‌ಗೆ ಹೋಗುವವರಿದ್ದರು. ಸ್ವಾಮೀಜಿ ಅವರೊಂದಿಗೆ ಹೋಗಬೇಕೆಂದೂ, ಅದಕ್ಕಾಗಿ ತಮ್ಮೊಂದಿಗೆ ಸಮುದ್ರಯಾನ ಮಾಡಿದರೆ ಅವರ ಆರೋಗ್ಯ ಸುಧಾರಿಸಲಿ ಎಂದೂ ಮಹಾರಾಜನು ಬಯಸಿದ್ದನು. ಆದ್ದರಿಂದ ಸ್ವಾಮೀಜಿಯವರನ್ನು ಅವನು ಸ್ವಾಮಿಜಿಯವರನ್ನು ಕಲ್ಕತ್ತೆಗೆ ಆಹ್ವಾನಿಸಿ, ತಮ್ಮೊಂದಿಗೆ ಪ್ರಯಾಣ ಮಾಡಿ, ಅಗತ್ಯ ಬಿದ್ದರೆ ವೈದ್ಯರನ್ನೂ ಕಾಣಬಹುದು ಎಂದೂ ತಿಳಿಸಿದ್ದನು. ಅದರಂತೆಯೇ ಸ್ವಾಮೀಜಿ ದಾರ್ಜಿಲಿಂಗಿನಿಂದ ಕಲ್ಕತ್ತೆಗೆ ಬಂದಿದ್ದರು. ಅವರು ಕಲ್ಕತ್ತೆಯ ಸಿಯಾಲ್‌ದಾ ರೈಲ್ವೇ ಸ್ಟೇಶನ್ನಿನಲ್ಲಿ ಬಂದಿಳಿದ



ಕೂಡಲೇ ಅಲ್ಲಿ ನೆರೆದಿದ್ದ ಕಲ್ಕತ್ತೆಯ ಮಾರವಾಡಿ ಜನಾಂಗದ ಜನರೆಲ್ಲರೂ ಅವರಿಗೆ ವೈಭವದ ಸ್ವಾಗತವನ್ನು ಮಾಡಿದರು. ಅವರ ಸ್ವಾಗತ ಭಾಷಣವನ್ನು ಸ್ವಾಮೀಜಿ ಅನುಮೋದಿಸಿದರು. ಮಹಾರಾಜಾ ಅಜಿತ್ ಸಿಂಗ್ ಅಧ್ಯಕ್ಷನಾಗಿದ್ದ ವರ್ತಕ ಸಮುದಾಯದ ಪ್ರಮುಖರು ಕೂಡಾ ಸ್ವಾಮೀಜಿಯವರನ್ನು ಆದರದಿಂದ ಸ್ವಾಗತಿಸಿದರು. ಅವರಲ್ಲಿ ಹಲವರು ಮಹಾರಾಜನ ಅಧೀನದಲ್ಲಿದ್ದ ಭೂಮಾಲೀಕರಾಗಿದ್ದರು — ಆಗಲೇ ಸ್ವಾಮೀಜಿ ಮಹಾರಾಜನ ಅತಿಥಿ ಹಾಗೂ ಗುರುವಾಗಿದ್ದರು. ಸ್ವಾಮೀಜಿಯವರನ್ನು ನೇರ ಮಹಾರಾಜನ ನಿವಾಸಕ್ಕೆ ಕರೆದುಕೊಂಡು ಹೋದರು. ಮರುದಿನ ಮಧ್ಯಾಹ್ನ ಸ್ವಾಮೀಜಿ ಮತ್ತು ಮಹಾರಾಜ ಇಬ್ಬರೂ ಜೊತೆಯಲ್ಲಿ ದಕ್ಷಿಣೇಶ್ವರದ ಕಾಳೀದೇವಾಲಯಕ್ಕೆ ಭೇಟಿಕೊಟ್ಟರು. ಸಂಜೆ ಮರಳುವಾಗ ಇಬ್ಬರೂ ಶ್ರೀರಾಮಕೃಷ್ಣರಿಗಾಗಿ ಸಮರ್ಪಿತವಾಗಿದ್ದ ಆಲಂಬಜಾರ್ ಮಠದಲ್ಲಿ[೧] ಸಾಯಂಕಾಲದ ಆರತಿಯಲ್ಲಿ ಪಾಲ್ಗೊಂಡರು. ಹೊರಡುವ ಮುನ್ನ ಅವರು ಪ್ರಸಾದ ಸ್ವೀಕರಿಸಿದರು. ಅವರ ಭೇಟಿಯ ಸಂದರ್ಭದಲ್ಲಿ ಎರಡೂ ಸ್ಥಳಗಳಲ್ಲಿ ಇರುವ ಭಾಗ್ಯ

---

[೧] ಬೇಲೂರು ಮಠದ ಸ್ಥಾಪನೆಯಾಗುವ ಮೊದಲು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ತಂಗಿದ್ದ ಮಠ ಇದಾಗಿತ್ತು.

ನನ್ನದಾಗಿತ್ತು. ನನ್ನೊಂದಿಗೆ 'ಶ್ರೀರಾಮಕೃಷ್ಣ ವಚನವೇದ'ದ ಗ್ರಂಥಕಾರ ಮಾಸ್ಟರ್ ಮಹಾಶಯರು ಕೂಡ ಇದ್ದರು. ಮರುದಿನ ಮಧ್ಯಾಹ್ನ ಸ್ವಾಮೀಜಿ ಇಬ್ಬರು ಯುವ ಬ್ರಹ್ಮಚಾರಿ ಶಿಷ್ಯಂದಿರೊಡನೆ ಶ್ರೀಮಾತೆಯವರ ದರ್ಶನ ಪಡೆಯಲು ಬಾಗ್‌ಬಜಾರಿನಲ್ಲಿದ್ದ ಅವರ ಮನೆಗೆ ಬಂದರು. ಆಗ ನಾನು ಸ್ವಾಮಿ ಯೋಗಾನಂದರ ಬಳಿ ಕುಳಿತು ಅವರ ಆಧ್ಯಾತ್ಮಿಕ ಮಾತುಗಳನ್ನು ಕೇಳುತ್ತಿದ್ದೆ. ಸ್ವಾಮೀಜಿ ಬಂದಿರುವ ಸುದ್ದಿ ತಲುಪಿದ ಕೂಡಲೇ ಸ್ವಾಮಿ ಯೋಗಾನಂದರು ಲಗುಬಗೆಯಿಂದ ಅವರನ್ನು ಬರಮಾಡಿಕೊಳ್ಳಲು ಹೊರಟರು. ಪರಸ್ಪರ ನಮಸ್ಕಾರಗಳಾದ ಮೇಲೆ ಸ್ವಾಮೀಜಿ, ಶ್ರೀಮಾತೆ ಹಾಗೂ ಇತರರು ಚೆನ್ನಾಗಿದ್ದಾರೆಯೇ ಎಂದು ಸ್ವಾಮಿ ಯೋಗಾನಂದರನ್ನು ವಿಚಾರಿಸಿದರು. ಸ್ವಾಮಿ ಯೋಗಾನಂದರು ಉತ್ತರಿಸುತ್ತ, ''ಠಾಕೂರರ (ಅಂದರೆ ಶ್ರೀರಾಮಕೃಷ್ಣರ) ಕೃಪೆಯಿಂದ ನಾವೆಲ್ಲ ಚೆನ್ನಾಗಿದ್ದೇವೆ. ದಾರ್ಜಿಲಿಂಗ್‌ನಲ್ಲಿ ನಿನ್ನ ಆರೋಗ್ಯವಾದರೂ ಹೇಗಿತ್ತು?'' ಎಂದರು. ಅವರಿಬ್ಬರೂ ಮಾತನಾಡುತ್ತಿದ್ದಾಗ, ಶ್ರೀಮಾತೆ ಸ್ವಾಮೀಜಿಯವರನ್ನು ಭೇಟಿಯಾಗಲು ಕಾಯುತ್ತಿದ್ದಾರೆಂದು ಸ್ವಾಮೀಜಿಯವರಿಗೆ ತಿಳಿಸಲಾಯಿತು. ಸ್ವಾಮೀಜಿ ಕೂಡಲೇ ನೇರವಾಗಿ ಶ್ರೀಮಾತೆಯವರ ಬಳಿಗೆ ಹೋದರು. ನಾವೆಲ್ಲರೂ ಅವರ ಹಿಂದೆಯೇ ಹೋದೆವು.

ಅದು ಸ್ಮರಣಾರ್ಹವಾದ ಹಾಗೂ ಚಾರಿತ್ರಿಕವಾದ ಸಂದರ್ಭ. ಸ್ವಾಮೀಜಿ ಪಾಶ್ಚಾತ್ಯ ದೇಶಗಳಿಂದ ಹಿಂದಿರುಗಿ ಎಲ್ಲೆಡೆ ವೈಭವಯುತವಾದ ಕೀರ್ತಿಗೆ ಭಾಜನರಾದ ಬಳಿಕ ಶ್ರೀಮಾತೆಯವರ ಹಾಗೂ ಜಗದ್ವಿಖ್ಯಾತರಾದ ಸ್ವಾಮಿ ವಿವೇಕಾನಂದರ ಭೇಟಿ ಇದೇ ಮೊದಲ ಬಾರಿಗೆ ನಡೆದಿತ್ತು. ಆಗ ಅಲ್ಲಿದ್ದುಕೊಂಡು ಇದನ್ನು ನೋಡಿದವರ ಆನಂದಾತಿಶಯ ಹೇಳತೀರದು. ಶ್ರೀಮಾತೆಯವರು ತಮ್ಮ ಕೋಣೆಯ ಬಾಗಿಲ ಬಳಿ ಮೌನವಾಗಿ ನಿಂತಿದ್ದರು. ಅವರು ತಲೆಯ ಮೇಲೆ ಎಂದಿನಂತೆ ಸೆರಗು ಎಳೆದುಕೊಂಡಿದ್ದರು. ಸ್ವಾಮೀಜಿ ಅವರ ಮುಂದೆ ನಮಸ್ಕಾರ ಮಾಡಿದರು. ಜಗತ್ಪ್ರಸಿದ್ಧರಾದ ಸ್ವಾಮಿ ವಿವೇಕಾನಂದರು ಶ್ರೀಮಾತೆಯವರ ಮುಂದೆ ಶ್ರದ್ಧಾವಂತ ಮಗನ ಹಾಗೆ ತುಂಬು ಗೌರವದಿಂದ ನಮಸ್ಕಾರ ಮಾಡುವುದನ್ನು ನೋಡುವುದೇ ಒಂದು ಸ್ವರ್ಗೀಯ ದೃಶ್ಯವಾಗಿತ್ತು. ಸುಮಾರು ಏಳು ವರ್ಷಗಳ ನಂತರ ಸ್ವಾಮೀಜಿಯವರನ್ನು ಕಂಡು ಶ್ರೀಮಾತೆಯವರು ಅತ್ಯಂತ ಆನಂದಗೊಂಡಿದ್ದರು. ಅವರು ಮಾತಿಲ್ಲದೆ ನಿಂತುಬಿಟ್ಟಿದ್ದರು — ಭಾವೋನ್ಮತ್ತರಾಗಿದ್ದಂತೆ ಕಂಡುಬಂದರು. ಆ ಪರಿಸರವೇ ಅವರ್ಣನೀಯವಾದ ಒಂದು ಭವ್ಯತೆಯಿಂದಲೂ, ದಿವ್ಯ ಆನಂದದಿಂದಲೂ ಅನುರಣಿತವಾಗಿತ್ತು. ೧೮೯೦ರಲ್ಲಿ ಸ್ವಾಮೀಜಿಯವರು ಶ್ರೀರಾಮಕೃಷ್ಣರ ಇನ್ನೊಬ್ಬ ನೇರ ಶಿಷ್ಯರಾದ ಸ್ವಾಮಿ ಅಖಂಡಾನಂದರೊಂದಿಗೆ ತಪಸ್ಸು ಮಾಡಲು ಹಿಮಾಲಯ ಯಾತ್ರೆಗೆ ಹೊರಟಿದ್ದಾಗ, ಶ್ರೀಮಾತೆಯವರ ಅನುಮತಿ ಪಡೆಯಲು ಹೋಗಿದ್ದರು; ಆಗ ಶ್ರೀಮಾತೆಯವರು ಅಖಂಡಾನಂದರನ್ನು ಪಕ್ಕಕ್ಕೆ ಕರೆದು ಹೇಳಿದ್ದರು: ''ಅವನ (ಅಂದರೆ ಸ್ವಾಮೀಜಿಯವರ) ಬಗ್ಗೆ ವಿಶೇಷ ಕಾಳಜಿ ವಹಿಸು. ಅವನ ಆರೋಗ್ಯದ ಬಗ್ಗೆ ವಿಶೇಷ ಗಮನ ಕೊಟ್ಟು ನೋಡಿಕೋ. ಸಮಯಕ್ಕೆ ಸರಿಯಾಗಿ ಅವನು ಆಹಾರ ತೆಗೆದುಕೊಳ್ಳುವಂತೆ ಮಾಡು. ನಿನಗಂತೂ ಹಿಮಾಲಯದ ಬೆಟ್ಟ-ಕಾಡುಗಳ ಮೂಲೆಮೂಲೆಯೂ ಗೊತ್ತಿದೆ. ಹಾಗಾಗಿ ನಿನ್ನೊಂದಿಗೆ ಅವನನ್ನು ಧೈರ್ಯವಾಗಿ ಕಳುಹಿಸುತ್ತಿದ್ದೇವೆ. ನಮಗೆ ಇರುವುದು ಅವನೊಬ್ಬನೇ — ಇದನ್ನು ನೆನಪಿನಲ್ಲಿಟ್ಟುಕೋ.'' ಇದಾದ ನಂತರ ಶ್ರೀಮಾತೆ ಸ್ವಾಮೀಜಿಯವರನ್ನು ಕಂಡಿರಲಿಲ್ಲ. ಅವರ ಬಗ್ಗೆ ಸುದ್ದಿ ತಿಳಿಯಲು ಶ್ರೀಮಾತೆ ಅತ್ಯಂತ ಉತ್ಕಂಠೆಯಿಂದಿದ್ದರು. ಸ್ವಾಮೀಜಿ ೧೮೯೩ರಲ್ಲಿ ಅಮೇರಿಕಾಗೆ ಹೊರಡುವ ಮುನ್ನ ಶ್ರೀಮಾತೆಯವರ ಪ್ರೀತಿಪೂರ್ವಕ ಆಶೀರ್ವಾದವನ್ನು ಕೋರಿ ಪತ್ರ ಬರೆದಿದ್ದರು. ಶ್ರೀಮಾತೆಯವರು ಶ್ರೀರಾಮಕೃಷ್ಣರನ್ನು ಪ್ರಾರ್ಥಿಸುತ್ತ, ಪಶ್ಚಿಮದಲ್ಲಿ ಸ್ವಾಮೀಜಿಯವರ ಕಾರ್ಯ ಸಫಲವಾಗುವಂತೆ ಹಾರೈಸಿ ಹೃತ್ಪೂರ್ವಕ ಆಶೀರ್ವಾದವನ್ನು ಬರೆದು ಕಳುಹಿಸಿಕೊಟ್ಟಿದ್ದರು. ಅಲ್ಲಿಂದ ನಂತರ ಶ್ರೀಮಾತೆಯವರು ಸ್ವಾಮೀಜಿಯವರ ಕೆಲಸ ಕಾರ್ಯಗಳ ಬಗ್ಗೆ, ಪಶ್ಚಿಮ ದೇಶಗಳಲ್ಲಿ ಅವರು ಶ್ರೀರಾಮಕೃಷ್ಣರ ಸಂದೇಶವನ್ನೂ ಹರಡುವ ಬಗ್ಗೆ ಯಾವಾಗಲೂ ಕೇಳಿ ತಿಳಿದುಕೊಳ್ಳುತ್ತಿದ್ದರು. ಅನೇಕ ವರ್ಷಗಳ ನಂತರ ಇಂದು ಸ್ವಾಮೀಜಿ ಮತ್ತೆ ಶ್ರೀಮಾತೆಯವರ ಬಳಿಗೆ ಬಂದು ಅವರನ್ನು ಭೇಟಿಯಾಗಿದ್ದಾರೆ. ಸಹಜವಾಗಿ ಶ್ರೀಮಾತೆಯವರು ಹಿಡಿಸಲಾರದ ಸಂತಸದಿಂದ ಕಲ್ಲಿನ ಮೂರ್ತಿಯಂತೆ ನಿಂತುಬಿಟ್ಟಿದ್ದರು.

ಸ್ವಾಮೀಜಿ ಶ್ರೀಮಾತೆಯವರಿಗೆ ಪ್ರಣಾಮ ಮಾಡುವಾಗ, ಸಾಮಾನ್ಯ ಪದ್ಧತಿಯಂತೆ ಅವರ ಕಾಲುಮುಟ್ಟಿ ನಮಸ್ಕರಿಸಲಿಲ್ಲ. ಅವರಿಗೆ ನಮಸ್ಕರಿಸಿ ಮೇಲೆದ್ದ ನಂತರ ಸ್ವಾಮೀಜಿ ಅವರ ಹಿಂದೆ ನಿಂತಿದ್ದ ನಮ್ಮತ್ತ ತಿರುಗಿ ಮೆಲುವಾದ ಧ್ವನಿಯಲ್ಲಿ ಹೇಳಿದರು, ''ಹೋಗಿ, ಶ್ರೀಮಾತೆಯವರಿಗೆ ನಮಸ್ಕಾರ ಮಾಡಿ. ಆದರೆ ಅವರ ಪಾದಗಳನ್ನು ಮುಟ್ಟಬೇಡಿ. ಅವರ ಕೃಪೆ ಅಪಾರ. ಅವರು ಎಷ್ಟೊಂದು ಮೃದು ಹಾಗೂ ಪ್ರೇಮಪೂರಿತರು ಎಂದರೆ, ಅವರ ಪಾದಗಳನ್ನು ಮುಟ್ಟಿದ ಕೂಡಲೇ ಅವರು ತಮ್ಮ ಅನಂತ ಕೃಪೆ ಹಾಗೂ ಅಸೀಮ ಪ್ರೀತಿ, ಕರುಣೆಗಳಿಂದ ಎಲ್ಲ ನತದೃಷ್ಟ ಜೀವಿಗಳ ಎಲ್ಲ ಕಷ್ಟ, ಸಂಕಟಗಳನ್ನು ತಮ್ಮ ಮೇಲೆ ಸೆಳೆದುಕೊಳ್ಳುತ್ತಾರೆ. ಅದರಿಂದ ಅವರು ಇತರರ ಕಾರಣದಿಂದಾಗಿ ಮೌನವಾಗಿ ಎಲ್ಲ ಕಷ್ಟಗಳನ್ನೂ ಅನುಭವಿಸಬೇಕಾಗುವುದು. ನಿಧಾನವಾಗಿ ಒಬ್ಬೊಬ್ಬರಾಗಿ ಹೋಗಿ ಅವರಿಗೆ ನಮಸ್ಕಾರ ಮಾಡಿ. ಅವರ ಆಶೀರ್ವಾದಕ್ಕಾಗಿ ಪ್ರಾರ್ಥನೆ ಮಾಡಿ. ಪ್ರಾಮಾಣಿಕವಾಗಿ ಪ್ರಾರ್ಥಿಸಿ, ಆದರೆ ಬಾಯಿಬಿಟ್ಟು ಹೇಳಬೇಕಾಗಿಲ್ಲ. ಯಾವಾಗಲೂ ಅವರು ಸಾಮಾನ್ಯ ಪ್ರಜ್ಞೆಯನ್ನು ಮೀರಿದ ಅವಸ್ಥೆಯಲ್ಲಿ ಇರುತ್ತಾರೆ, ಹಾಗೂ ಎಲ್ಲರ ಮನಸ್ಸನ್ನೂ ಅರಿತುಕೊಳ್ಳುತ್ತಾರೆ.'' ಸ್ವಾಮೀಜಿಯವರ ನಿರ್ದೇಶನದಂತೆ ನಾವೆಲ್ಲರೂ ಒಬ್ಬೊಬ್ಬರಾಗಿ ಹೋಗಿ ಶ್ರೀಮಾತೆಯವರಿಗೆ ನಮಸ್ಕರಿಸಿದೆವು. ಸ್ವಾಮೀಜಿ ವರಾಂಡದ ಒಂದು ಮೂಲೆಯಲ್ಲಿ ಮೌನವಾಗಿ ನಿಂತಿದ್ದರು. ನಾವೆಲ್ಲರೂ ಪ್ರಣಾಮ ಮಾಡಿ ಮುಗಿಸಿದ ನಂತರ ಗೋಲಾಪ್-ಮಾ[೨] ಮೌನವನ್ನು ಭಂಗ ಮಾಡಿ ಸ್ವಾಮೀಜಿಯವರಿಗೆ ಶ್ರೀಮಾತೆಯವರ ಪರವಾಗಿ ಅತ್ಯಂತ ಪ್ರೀತಿಯ ಧ್ವನಿಯಿಂದ ಹೇಳಿದರು:

---

೨ ಗೋಲಾಪ್-ಮಾ ಅವರು ಶ್ರೀರಾಮಕೃಷ್ಣರ ಶಿಷ್ಯೆ ಹಾಗೂ ಶ್ರೀಮಾತೆಯವರ ಆಪ್ತ ಒಡನಾಡಿಯಾಗಿದ್ದರು.

‘‘ದಾರ್ಜಿಲಿಂಗ್ ನಲ್ಲಿ ನಿನ್ನ ಆರೋಗ್ಯ ಹೇಗಿತ್ತೆಂದು ಶ್ರೀಮಾತೆ ತಿಳಿಯಲು ಕಾತರರಾಗಿದ್ದಾರೆ. ಆರೋಗ್ಯ ಸುಧಾರಿಸಿದೆಯೆ?’’

**ಸ್ವಾಮೀಜಿ:** ಹೌದು, ಅಲ್ಲಿ ನಾನು ಚೆನ್ನಾಗಿದ್ದೆ. ಅಲ್ಲಿ ಮಹೇಂದ್ರ ಬ್ಯಾನರ್ಜಿ[೨] ಹಾಗೂ ಅವರ ನಿಪುಣೆಯಾದ ಪತ್ನಿ ನನ್ನ ಸುಖ ಸೌಕರ್ಯಗಳನ್ನೆಲ್ಲ ಚೆನ್ನಾಗಿ ನೋಡಿಕೊಂಡರು. ಸ್ವಲ್ಪ ಸಮಯ ದಲ್ಲೇ ನನಗೆ ಎಲ್ಲವೂ ವಾಸಿಯಾಗುವುದು ಅನ್ನಿಸುತ್ತದೆ.

**ಗೋಲಾಪ್-ಮಾ:** ಠಾಕೂರರು ಯಾವಾಗಲೂ ನಿನ್ನೊಂದಿ ಗಿದ್ದಾರೆ ಎಂದು ಶ್ರೀಮಾತೆಯವರು ಹೇಳುತ್ತಾರೆ. ಜಗತ್ತಿನ ಹಿತ ಕ್ಕಾಗಿ ನೀನು ಸಾಧಿಸಬೇಕಾದದ್ದು ಇನ್ನಷ್ಟು ಇದೆ.

**ಸ್ವಾಮೀಜಿ:** ನಾನು ನೇರವಾಗಿ ನೋಡುತ್ತಿದ್ದೇನೆ ಹಾಗೂ ಅರ್ಥ ಮಾಡಿಕೊಳ್ಳುತ್ತಿದ್ದೇನೆ, ನಾನು ಠಾಕೂರರ ಒಂದು ಉಪಕರಣ ಮಾತ್ರ. ಇಷ್ಟೊಂದು ಅದ್ಭುತವಾದ ಘಟನೆಗಳು ಹೇಗೆ ನಡೆದವು ಎಂದು ಕೆಲವು ಸಲ ನಾನು ಆಶ್ಚರ್ಯಪಡುತ್ತೇನೆ. ಈ ಉನ್ನತ ಆದರ್ಶಕ್ಕಾಗಿ ಹಾಗೂ ಠಾಕೂರರ ಸಂದೇಶವನ್ನೂ ಹರಡುವುದಕ್ಕಾಗಿ ಪಶ್ಚಿಮ ದೇಶಗಳಲ್ಲಿ ಸ್ತ್ರೀಯರು ಹಾಗೂ ಪುರುಷರು ತಮ್ಮ ಇಡೀ ಜೀವನವನ್ನು ಅರ್ಪಿಸಲು ತಯಾರಾಗಿದ್ದಾರೆ — ಇದು ನಾನು ಕಂಡ ಅಚ್ಚರಿಯ ಸಂಗತಿ. ನಾನು ಶ್ರೀಮಾತೆಯವರ ಆಶೀರ್ವಾದ ದೊಂದಿಗೆ ಅಮೆರಿಕಾಗೆ ಹೋದೆ. ನನ್ನ ಭಾಷಣಗಳ ಮೂಲಕ ನಾನು ಅಲ್ಲಿನ ಜನತೆಯನ್ನು ಪ್ರಭಾವಿತರನ್ನಾಗಿಸಿ, ಅವರಿಂದ ಜಯಘೋಷಗಳನ್ನು ಸ್ವೀಕರಿಸಿದಾಗ, ನನಗೆ ಶ್ರೀಮಾತೆಯವರ ಆಶೀರ್ವಾದ ಎಂತಹ ಅದ್ಭುತಗಳನ್ನು ಮಾಡಿತು ಎಂಬುದು ನೆನಪಾಯಿತು. ನಾನು ಮೌನವಾಗಿ ವಿಶ್ರಾಂತಿ ಪಡೆದುಕೊಳ್ಳು ತ್ತಿದ್ದಾಗ ಸ್ಪಷ್ಟವಾಗಿ ಗ್ರಹಿಸುತ್ತಿದ್ದೆ — ಠಾಕೂರರು ಜಗನ್ಮಾತೆ ಎಂದು ಕರೆಯುತ್ತಿದ್ದ ಅದೇ ದಿವ್ಯಶಕ್ತಿ ನನ್ನನ್ನೂ ಅಲ್ಲಿ ಮುನ್ನಡೆಸುತ್ತಿತ್ತು ಎಂದು.

ಇದಕ್ಕೆ ಶ್ರೀಮಾತೆಯವರ ಉತ್ತರವನ್ನು ತಿಳಿಸುತ್ತ ಗೋಲಾಪ್-ಮಾ ಹೇಳಿದರು: ‘‘ಠಾಕೂರರು ಜಗನ್ಮಾತೆಗಿಂತ ಬೇರೆಯಲ್ಲ. ನಿನ್ನ ಮೂಲಕ ಠಾಕೂರರೇ ಈ ಎಲ್ಲ ಮಹತ್ಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ಅವರು ಆಯ್ಕೆ ಮಾಡಿದ ಶಿಷ್ಯ ಹಾಗೂ ಪುತ್ರ ನೀನು. ಅವರು ನಿನ್ನನ್ನು ಅತಿಹೆಚ್ಚು ಪ್ರೀತಿಸುತ್ತಿದ್ದರು. ಎಲ್ಲರ ಮುಂದೆ ಅವರು ಭವಿಷ್ಯ ನುಡಿದಿದ್ದರು, ಮುಂದೆ ಒಂದು ದಿನ ನೀನು ಜಗತ್ತಿನ ಶ್ರೇಷ್ಠ ಗುರುವಾಗಲಿದ್ದೀಯೆ ಎಂದು.’’

ಭಾವಪೂರಿತವಾಗಿ ಸ್ವಾಮೀಜಿ ಹೇಳಿದರು: ‘‘ಅಮ್ಮಾ, ನಾನು ಅವರ (ಶ್ರೀರಾಮಕೃಷ್ಣರ) ಸಂದೇಶಗಳನ್ನು ಹರಡಬಯಸುತ್ತೇನೆ. ಅದಕ್ಕೆ ಯೋಗ್ಯವಾದ ಹಾಗೂ ಸುಸ್ಥಿರವಾಗಿ ನಿಲ್ಲಬಲ್ಲ ಒಂದು ಸಂಸ್ಥೆಯನ್ನು ಆದಷ್ಟು ಬೇಗ ಸ್ಥಾಪಿಸಬೇಕೆಂದಿದ್ದೇನೆ. ಆದರೆ ನಾನು ಬಯಸುವಷ್ಟು ವೇಗವಾಗಿ ಈ ಕಾರ್ಯವನ್ನು ಮಾಡಲಾಗದು ಎಂದು ನಾನು ಚಿಂತೆಗೊಳಗಾಗಿದ್ದೇನೆ.’’

ಈಗ ಶ್ರೀಮಾತೆಯವರೇ ಮಾತೃಪ್ರೇಮ ತುಂಬಿದ ಮೆಲು ದನಿಯಿಂದ ಹೇಳಿದರು: ‘‘ಆ ಬಗ್ಗೆ ಚಿಂತಿಸಬೇಡ. ನೀನೇನು ಮಾಡಿದ್ದೀಯೋ, ಮುಂದೇನು ಮಾಡುವೆಯೋ ಅದು ಶಾಶ್ವತ ವಾಗಿ ನಿಲ್ಲುವುದು. ನೀನು ಈ ಕೆಲಸಕ್ಕಾಗಿ, ಈ ಉದ್ದೇಶಕ್ಕಾಗಿ ಹುಟ್ಟಿರುವವನು. ಸಾವಿರಾರು ಜನರು ನಿನ್ನನ್ನು ಜಗದ್ಗುರುವೆಂದೇ ನೋಡುತ್ತಾರೆ. ಠಾಕೂರರು ನಿನ್ನ ಇಚ್ಛೆಯನ್ನು ಬಹಳ ಬೇಗನೆ ಪೂರೈಸುವರು ಎಂದೇ ತಿಳಿ. ನಿಶ್ಚಿಂತನಾಗು. ನಿನ್ನ ಭಾವನೆಗಳು ಕಾರ್ಯರೂಪಕ್ಕೆ ಬರುವುದನ್ನು ನೀನು ಸದ್ಯದಲ್ಲೇ ನೋಡುವೆ.’’

ಅಪಾರ ಗೌರವ ಹಾಗೂ ಪ್ರಾರ್ಥಿಸುವ ಭಾವದಿಂದ ಸ್ವಾಮೀಜಿ ಶ್ರೀಮಾತೆಯವರಿಗೆ ಹೇಳಿದರು: ‘‘ಅಮ್ಮಾ, ನನ್ನ ಕಾರ್ಯ ಯೋಜನೆಗಳು ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ ಕಾರ್ಯ ಗತವಾಗುವಂತೆ ನನ್ನನ್ನು ಆಶೀರ್ವದಿಸಿ. ಒಂದೋ ಎರಡೋ ದಿನ ಗಳಲ್ಲಿ ನಾನು ದಾರ್ಜಿಲಿಂಗಿಗೆ ಮರಳುತ್ತೇನೆ. ಖೇತ್ರಿಯ ರಾಜನ ಕೋರಿಕೆಯಂತೆ ನಾನು ಕಲ್ಕತ್ತೆಗೆ ಬಂದಿದ್ದೇನೆ, ಅಷ್ಟೆ.’’ ಹೀಗೆಂದು ಸ್ವಾಮೀಜಿ, ಮತ್ತೊಮ್ಮೆ ಶ್ರೀಮಾತೆಯವರಿಗೆ ಗೌರವಪೂರ್ವಕ ವಾಗಿ ಅವರಿಂದ ಬೀಳ್ಕೊಂಡರು.

ಅನಂತರ ಸ್ವಾಮೀಜಿ ವರಾಂಡದಲ್ಲಿ ತಮಗಾಗಿ ಕಾದು ನಿಂತಿದ್ದ ಸ್ವಾಮಿ ಯೋಗಾನಂದರನ್ನು ನೋಡಿ ಮಾತನಾಡಲು ಹೋದರು. ಸ್ವಾಮೀಜಿ ಕೇಳಿದರು, ‘‘ಹೇಗಿದ್ದೀಯಾ, ಯೋಗೇನ್? ಬಹುಶಃ ನಾಳೆಯೇ ನಾನು ದಾರ್ಜಿಲಿಂಗ್‌ಗೆ ಮರಳಿ ಹೋಗಲಿದ್ದೇನೆ.’’

ಸ್ವಾಮಿ ಯೋಗಾನಂದರು: ‘‘ಸ್ವಾಮೀಜಿ, ಈಗ ನೀನು ಮಹಾ ರಾಜನ ಅತಿಥಿಯಾಗಿ ದೊಡ್ಡ ಅರಮನೆಯಲ್ಲಿ ದೊಡ್ಡ ದೊಡ್ಡ ವ್ಯಾಪಾರಿಗಳ ನಡುವೆ ಇದ್ದೀಯಾ. ಅಲ್ಲಿ ನಿನಗೆ ಹೇಗನ್ನಿಸುತ್ತದೆ?’’

ಸ್ವಾಮೀಜಿ: ‘‘ಅವರಲ್ಲಿ ಹೆಚ್ಚಿನವರು ರಾಜನ ಕೈಕೆಳಗೆ ಇರುವ ಜಮೀನ್ದಾರರು. ಅವರೆಲ್ಲರೂ ನನಗೆ ತುಂಬಾ ಗೌರವ ತೋರು ತ್ತಾರೆ. ಖೇತ್ರಿಯ ರಾಜ ಅತ್ಯಂತ ಗೌರವಾನ್ವಿತ ಹಾಗೂ ನಿಜವಾದ ಕ್ಷತ್ರಿಯ ಗುಣವನ್ನು ಹೊಂದಿದವನು — ಆದ್ದರಿಂದ ನನಗೆ ಅವನ ಬಗ್ಗೆ ಹೆಚ್ಚಿನ ಆತ್ಮೀಯತೆ. ನಮ್ಮ ದೇಶಕ್ಕೆ ಇಂದು ನಿರ್ಭೀತಿ, ಅದಮ್ಯ ಚೈತನ್ಯ ಹಾಗೂ ಧೈರ್ಯಶಾಲಿ ಗುಣಗಳಿಂದ ಕೂಡಿದ ಕ್ಷಾತ್ರತೇಜಸ್ಸು ಬೇಕಾಗಿದೆ. ನಮ್ಮ ಜನರು ಅಸಂಖ್ಯಾತ ಅನಿಷ್ಟ ಹಾಗೂ ಬೆಟ್ಟದಂತಹ ವಿಘ್ನಗಳನ್ನು ಎದುರಿಸಿ ಹೋರಾಡಲು ನಿರಂ ತರ ರಾಜಸಿಕ ಚಟುವಟಿಕೆಗಳಲ್ಲಿ ತೊಡಗಬೇಕಾಗಿದೆ. ನಿನಗೆ ಗೊತ್ತೆ, ಯೋಗೇನ್? ನಾನು ಶೂರರನ್ನು ಇಷ್ಟಪಡುತ್ತೇನೆ, ಅವರನ್ನು ಆರಾ ಧಿಸುತ್ತೇನೆ. ಹೇಡಿತನವನ್ನು ನಾನು ದ್ವೇಷಿಸುತ್ತೇನೆ. ತಾಮಸಿಕ ವಾದ ಜಡತ್ವ ಹಾಗೂ ಸೋಮಾರಿತನದ ಪರಿಣಾಮವೇ ಹೇಡಿತನ. ರಾಜನು ಅವನೊಂದಿಗೆ ನನ್ನನ್ನೂ ಲಂಡನ್ನಿಗೆ ಕರೆದೊಯ್ಯಲು ತುಂಬ ಒತ್ತಾಯಿಸಿದ್ದಾನೆ; ನನಗೂ ಸಮುದ್ರಯಾನ ಮಾಡಲು ಮನಸ್ಸಾಗಿದೆ. ಆದರೆ ವೈದ್ಯರು ಮಾತ್ರ ಈಗ ಹಾಗೆ ಮಾಡಬಾರ ದೆಂದು ನನ್ನನ್ನು ಬಲವಾಗಿ ನಿರ್ಬಂಧಿಸಿದ್ದಾರೆ. ನಾನು ಸಂಪೂರ್ಣ ವಿಶ್ರಾಂತಿ ಪಡೆಯಬೇಕೆಂದು ಅವರು ಹೇಳುತ್ತಾರೆ. ನನ್ನ ದೇಹ ವೇನೋ ಅದನ್ನು ಮಾಡಬಹುದು, ಆದರೆ ನನ್ನ ಮನಸ್ಸು ಯಾವಾ ಗಲೂ ತೀವ್ರ ಚಟುವಟಿಕೆಯಿಂದ ಕೂಡಿದೆ. ನಮ್ಮ ಸಂಘವನ್ನು ಭದ್ರ ಬುನಾದಿಯ ಮೇಲೆ ನೆಲೆಗೊಳಿಸುವ ತನಕ, ನನ್ನ ಭಾವನೆ ಗಳನ್ನು ಪ್ರಾಯೋಗಿಕವಾಗಿ ಮತ್ತು ಪರಿಣಾಮಕಾರಿಯಾಗಿ ಅಕ್ಷರಶಃ

೨. ಸ್ವಾಮಿ ವಿವೇಕಾನಂದರ ನಿಷ್ಠಾವಂತ ಭಕ್ತರು; ದಾರ್ಜಿಲಿಂಗ್‌ನ ಪ್ರಸಿದ್ಧ ವಕೀಲರು ಕೂಡ.

ಕಾರ್ಯಗತಗೊಳಿಸುವ ತನಕ, ಹಾಗೂ ಆತ್ಮಾರಾಮನಿಗೆ ❀ ಒಂದು ಉತ್ತಮ ನಿವಾಸ ಹಾಗೂ ನಮ್ಮ ಆಶ್ರಮಕ್ಕೆ ಒಂದು ಶಾಶ್ವತ ಸ್ಥಳವನ್ನು ನಿರ್ಮಿಸುವ ತನಕ ನನಗೆ ವಿಶ್ರಾಂತಿಯೆಂಬುದೇ ಇರದು.

**ಯೋಗಾನಂದರು:** ನೀನು ಹೇಳುವುದೆಲ್ಲವೂ ನಿಜ. ಆದರೆ ನೀನು ಅವರ(ಶ್ರೀರಾಮಕೃಷ್ಣರ) ಕೆಲಸ ಮಾಡುವ ಸಲುವಾಗಿಯಾದರೂ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕು. ಅವರಿಂದ ಪ್ರೇರಿತನಾಗಿ ನೀನು ಯೋಜನೆ ಹಾಕಿಕೊಂಡಿರುವ ಕೆಲಸಗಳನ್ನು ಪೂರೈಸಲು ಹಾಗೂ ಅವರು ನಿನಗೆ ನೀಡಿದ ದೈವೀ ಕಾರ್ಯವನ್ನು ನೆರವೇರಿಸಲು ನಿನಗದು ಅಗತ್ಯವಾಗಿದೆ.

**ಸ್ವಾಮೀಜಿ:** ಸರಿ, ಸೋದರ; ಈಗ ಅದರ ಬಗ್ಗೆ ಮಾತನಾಡಲು ನನಗೆ ಸಮಯವಿಲ್ಲ. ಈಗ ನಾನು ರಾಜಕುಮಾರರೊಡನೆ ಹಾಗೂ ಬೇರೆ ಮುಖಂಡರೊಡನೆ ತುರ್ತಾಗಿ ಭೇಟಿಯಾಗಬೇಕಾಗಿದೆ. ಅವರೆಲ್ಲ ಲಂಡನ್‌ಗೆ ಆಹ್ವಾನಿತರಾಗಿ ಹೋಗುತ್ತಿದ್ದಾರೆ. ಇನ್ನು ತಡ ಮಾಡಲಾಗದು. ನಿನಗೆ ನನ್ನ ಪ್ರೀತಿಯ ಶುಭಾಶಯಗಳು.

ಎರಡೂ ಕೈಗಳನ್ನು ಮುಗಿದು ಸ್ವಾಮಿ ಯೋಗಾನಂದರು ಹೇಳಿದರು, ''ನಿನಗೆ ನನ್ನ ಪ್ರೀತಿ ಹಾಗೂ ಸಾಷ್ಟಾಂಗ ಪ್ರಣಾಮಗಳು. ವೈದ್ಯರು ಹೇಳಿದಂತೆ ಚೆನ್ನಾಗಿ ವಿಶ್ರಾಂತಿ ತೆಗೆದುಕೋ. ನಮ್ಮ ಕೋರಿಕೆಯಂತೆ, ನಮ್ಮ ಗುರುದೇವನ ಆಜ್ಞೆಯಂತೆ, ಸಾಧಿಸಬೇಕಾದ ಕಾರ್ಯಕ್ಕೋಸ್ಕರ ನೀನು ಈಗ ವಿಶ್ರಾಂತಿ ತೆಗೆದುಕೊಳ್ಳಬೇಕು.''

ಸ್ವಾಮೀಜಿ ಅವರತ್ತ ಪ್ರೀತಿತುಂಬಿದ ಮೃದುನೋಟವನ್ನು ಬೀರಿ ಹೇಳಿದರು: ''ನನ್ನ ಮೂಲಕ ಹೇಗೆ ಕೆಲಸಮಾಡಿಸಬೇಕೆಂಬುದನ್ನು ಜಗನ್ಮಾತೆ ಚೆನ್ನಾಗಿ ಅರಿತಿದ್ದಾಳೆ. ಅವಳ ದಿವ್ಯ ಇಚ್ಛೆಗೆ ಹಾಗೂ ಅಸಾಧಾರಣ ಶಕ್ತಿಗೆ ನಾನು ಕೇವಲ ಒಂದು ಉಪಕರಣ ಮಾತ್ರವೆಂಬುದನ್ನು ಖಂಡಿತವಾಗಿಯೂ ತಿಳಿದುಕೋ.'' ಸ್ವಾಮೀಜಿ ಈ ಮಾತುಗಳೊಂದಿಗೆ ವಿದಾಯ ಹೇಳಿದರು. ನಾವೆಲ್ಲರೂ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದೆವು.

ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರೆಲ್ಲರೂ ಯಾವುದೇ ನಿರ್ಧಾರ ತೆಗೆದುಕೊಳ್ಳುವಾಗ ಅಥವಾ ಯಾವುದಾದರೂ ಕಾರ್ಯವನ್ನು ಮಾಡುವಾಗ ಶ್ರೀಮಾತೆಯವರ ಮಾತೇ ಅಂತಿಮವೆಂದು ಭಾವಿಸುದ್ದುದು ಒಂದು ಆಶ್ಚರ್ಯಕರ ಸಂಗತಿಯೇ ಸರಿ. ಅವರಲ್ಲಿ ಯಾರಾದರೂ ಒಬ್ಬರು ಯಾತ್ರೆ ಹೊರಟಾಗ, ಅಥವಾ ನಿರ್ಜನ ಪ್ರದೇಶದಲ್ಲಿ ತಪಸ್ಸು ಮಾಡಲು ಹೊರಟಾಗ ಅವರು ಶ್ರೀಮಾತೆಯವರ ಅನುಮತಿ ಹಾಗೂ ಆಶೀರ್ವಾದವನ್ನು ತಪ್ಪದೇ ಪಡೆಯುತ್ತಿದ್ದರು. ಈ ಹಿಂದೆ ಹೇಳಿರುವಂತೆ, ಸ್ವಾಮಿ ವಿವೇಕಾನಂದರೂ ಕೂಡ ಅಮೆರಿಕಾಗೆ ಹೊರಡುವ ಮುನ್ನ ಶ್ರೀಮಾತೆಯವರ ಆಶೀರ್ವಾದವನ್ನು ಕೋರಿದ್ದರು. ಶ್ರೀರಾಮಕೃಷ್ಣರ ನೇರ ಶಿಷ್ಯಂದಿರಲ್ಲಿ ಪ್ರತಿಯೊಬ್ಬರೂ ದೊಡ್ಡ ಅಥವಾ ಸಣ್ಣ ವಿಷಯ ಯಾವುದೇ ಇದ್ದರೂ, ಶ್ರೀಮಾತೆಯವರ ಸಲಹೆ ಹಾಗೂ ಅನುಮತಿಯನ್ನು ಪಡೆಯದೆ ಮುಂದೆ ಹೋಗುತ್ತಿರಲಿಲ್ಲ. ಶ್ರೀರಾಮಕೃಷ್ಣರ ನೇರ ಶಿಷ್ಯಂದಿರೊಡನೆ ಬಹುದೀರ್ಘಕಾಲದ ಸಂಪರ್ಕ ಹೊಂದಿರುವ ನಾನು ಎಂದಿಗೂ ಈ ಸಂನ್ಯಾಸೀ ಸಂಘದ ಗುರುಭಾಯಿಗಳು ಶ್ರೀಮಾತೆಯವರ ಮೇಲೆ ಹೊಂದಿದ್ದ ಶ್ರದ್ಧೆಯನ್ನೇ ಅವಲಂಬಿಸಿದ್ದುದನ್ನು ಯಾವಾಗಲೂ ನೋಡಿದ್ದೇನೆ. ಅವರೆಲ್ಲರೂ ಶ್ರೀರಾಮಕೃಷ್ಣರ ದೈವಿಕತೆಯಲ್ಲಿ ನಂಬಿಕೆಯಿಟ್ಟಿದ್ದರೂ, ಶ್ರೀಮಾತೆಯವರ ದೈವಿಕತೆಯಲ್ಲೂ ಅವರಿಗೆ ಸುಸ್ಥಿರವಾದ ಹಾಗೂ ಪ್ರಾಮಾಣಿಕವಾದ ನಂಬಿಕೆಯಿತ್ತು.

ಸ್ವಾಮಿ ಯೋಗಾನಂದರು ಯಾವಾಗಲೂ ಶ್ರೀಮಾತೆಯವರ ಬಗ್ಗೆ ಅತ್ಯಂತ ಗೌರವಪೂರ್ವಕವಾಗಿ ಮಾತನಾಡುತ್ತಿದ್ದರು. ಚಿಕ್ಕ ಮಗುವಾಗಿದ್ದಾಗಲೇ ಪ್ರಾಪಂಚಿಕ ಸುಖಭೋಗಗಳಲ್ಲಿ ಅವರಿಗಿದ್ದ ಸಂಪೂರ್ಣ ವೈರಾಗ್ಯ, ಅಹಂಕಾರಶೂನ್ಯವೂ ಶಾಂತವೂ ಆದ ಅವರ ಮನಃಸ್ಥಿತಿ, ಅವರ ನಿಷ್ಕಳಂಕ ಸ್ವಭಾವ, ಮಗುವಿನಂತೆ ಸರಳತನ ಹಾಗೂ ನಿರಾಡಂಬರ ಜೀವನ, ಎಲ್ಲೆಯಿಲ್ಲದ ಮಾತೃಪ್ರೇಮ, ಎಲ್ಲರ ಮೇಲೆ ಅವರಿಗಿದ್ದ ಅಪಾರ ಕರುಣೆ, ಅವರ ಆಳವಾದ ಆಧ್ಯಾತ್ಮಿಕ ಸಾಕ್ಷಾತ್ಕಾರ, ಆಧ್ಯಾತ್ಮಿಕ ಸಾಧಕರ ಮನಸ್ಸು-ಹೃದಯಗಳ ಮೇಲೆ ಪ್ರಭಾವ ಬೀರಿ, ಅವುಗಳನ್ನು ಔನ್ನತ್ಯಕ್ಕೇರಿಸುವ ಶಕ್ತಿ — ಈ ವಿಷಯಗಳನ್ನು ಕುರಿತು ಅವರು ನಮಗೆ ನಿರರ್ಗಳವಾಗಿ ಹೇಳುತ್ತಾ ಹೋಗುತ್ತಿದ್ದರು. ನಮ್ಮ ಪುರಾಣ, ಇತಿಹಾಸಗಳಲ್ಲಿ ಚಿತ್ರಿಸಿರುವ ಹಲವು ಮಂದಿ ಆಧ್ಯಾತ್ಮಿಕ ಮಹಾಪುರುಷರಷ್ಟೇ ಶ್ರೇಷ್ಠ ವ್ಯಕ್ತಿತ್ವ ಶ್ರೀಮಾತೆಯವರದಾಗಿತ್ತು, ಅವರು ಹೆಚ್ಚು ಪ್ರಸಿದ್ಧರಾಗದಿದ್ದರೂ ಕೂಡ. ಶ್ರೀರಾಮಕೃಷ್ಣರಿಗೆ ಶ್ರೀಮಾತೆಯವರೊಂದಿಗೆ ಇದ್ದ ಪವಿತ್ರ ಸಂಬಂಧವನ್ನು ತಾವು ಒಂದು ಬಾರಿ ಶಂಕಿಸಿದ್ದ ವಿಚಾರವಾಗಿ ಕೂಡ ಸ್ವಾಮಿ ಯೋಗಾನಂದರು ನನಗೆ ವಿವರಿಸಿದರು. ಶ್ರೀರಾಮಕೃಷ್ಣರು ರಾತ್ರಿಹೊತ್ತು ಶ್ರೀಮಾತೆಯವರ ಕೋಣೆಗೆ ಹೋಗಿದ್ದುದಾಗಿ ಅವರು ಭಾವಿಸಿದ್ದರು. ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿದ್ದಾಗ, ಶ್ರೀರಾಮಕೃಷ್ಣರ ಕೋಣೆಗೆ ಹೆಚ್ಚು ದೂರವಲ್ಲದ ನಹಬತ್ ಖಾನೆ (ಸಂಗೀತದ ಮನೆ) ಎಂಬ ಒಂದು ಪ್ರತ್ಯೇಕವಾಗಿದ್ದ ಕಟ್ಟಡದಲ್ಲಿ ವಾಸಿಸುತ್ತಿದ್ದರು. ಒಂದು ದಿನ ರಾತ್ರಿ ಶ್ರೀರಾಮಕೃಷ್ಣರು ತಮ್ಮ ಕೋಣೆಯಿಂದ ಹೊರಟವರು, ನಹಬತ್ ಖಾನೆಯ ಕಡೆಗೆ ಹೋಗುತ್ತಿದ್ದುದನ್ನು ಕಂಡ ಸ್ವಾಮಿ ಯೋಗಾನಂದರು ಸಂದೇಹಕ್ಕೊಳಗಾಗಿ, ಅವರನ್ನು ಹಿಂದಿನಿಂದ ಗಮನಿಸುತ್ತ ಅವರ ಹಿಂದೆಯೇ ಹೋದರು. ಆದರೆ ಆಶ್ಚರ್ಯವೆಂಬಂತೆ ಶ್ರೀರಾಮಕೃಷ್ಣರು ನಹಬತ್‌ಖಾನೆಯನ್ನು ದಾಟಿ ಹೋದರು — ಶ್ರೀಮಾತೆಯವರ ಕೋಣೆಯ ಕಡೆಗೆ ತಿರುಗಿಯೂ ನೋಡದೆ, ಅತ್ಯಂತ ಉದಾಸೀನ ಭಾವದಿಂದ ದೇವಾಲಯದ ಆವರಣದ ಉತ್ತರಭಾಗದ ತುದಿಗೆ ಶೌಚಕ್ಕಾಗಿ ಹೋದರು. ಆಗ ಬೆಳದಿಂಗಳು ಹರಡಿತ್ತು. ಅಂಥ ರಾತ್ರಿಯ ಹೊತ್ತಿನಲ್ಲಿಯೂ ನಹಬತ್‌ಖಾನೆಯಲ್ಲಿ ಶ್ರೀಮಾತೆಯವರು ಗಾಢವಾದ ಧ್ಯಾನ ಮಾಡುತ್ತ ಕುಳಿತಿದ್ದರು. ಶ್ರೀಮಾತೆಯವರ ಮುಖ ದಿವ್ಯ ಕಾಂತಿಯಿಂದಲೂ, ಆಧ್ಯಾತ್ಮಿಕ ಪ್ರಭೆಯಿಂದಲೂ ಬೆಳಗುತ್ತಿದ್ದು, ಅವರು ಬಾಹ್ಯಪ್ರಜ್ಞೆಯಿಲ್ಲದೆ ಧ್ಯಾನದಲ್ಲಿ ಮುಳುಗಿದ್ದರು. ಪರಿಶುದ್ಧ ಸಂತರಾದ ಶ್ರೀರಾಮಕೃಷ್ಣರ ಬಗ್ಗೆ ಸಂದೇಹಪಟ್ಟೆನಲ್ಲ ಎಂದು ನಾಚಿಕೆಗೊಳಗಾಗಿ ಆಲೋಚಿಸುತ್ತ ನಿಂತಿದ್ದ ಸ್ವಾಮಿ ಯೋಗಾನಂದರು ಅವಸರವಾಗಿ ಶ್ರೀರಾಮಕೃಷ್ಣರ ಕೋಣೆಯ ಉತ್ತರ ಭಾಗದಲ್ಲಿದ್ದ ತಮ್ಮ ಹಾಸಿಗೆ

❀ ಶ್ರೀರಾಮಕೃಷ್ಣರ ಪವಿತ್ರ ಅಸ್ಥಿಗೆ 'ಆತ್ಮಾರಾಮ' ಎಂದು ಸ್ವಾಮೀಜಿ ಕರೆಯುತ್ತಿದ್ದರು.

ಯತ್ತ ಹೋದರು. ಆದರೆ ಅವರಿಗಿಂತ ವೇಗವಾಗಿ ಶ್ರೀರಾಮಕೃಷ್ಣರು ಅಲ್ಲಿಗೆ ತಲುಪಿದ್ದರು. ಅವರಿಗೆ ಸಂಗತಿಯೇನೆಂದು ಎಲ್ಲವೂ ಅರ್ಥವಾಯಿತು. ಗಲಿಬಿಲಿಗೊಂಡಿದ್ದ ಶಿಷ್ಯನನ್ನು ಸಮಾಧಾನಪಡಿಸುತ್ತ ಅವರು, ಸ್ಫೂರ್ತಿ ನೀಡುವ, ಶಕ್ತಿಶಾಲಿಯಾದ ಮಾತಿನಿಂದ ಹೇಳಿದರು: ''ಒಳ್ಳೆಯದನ್ನೇ ಮಾಡಿದೆ — ನಿಜ, ಸಾಧುವನ್ನು ಹಗಲು ಮಾತ್ರವಲ್ಲ, ರಾತ್ರಿಯೂ ಪರೀಕ್ಷೆ ಮಾಡು; ಅನಂತರವಷ್ಟೇ ಅವನನ್ನು ಸ್ವೀಕಾರ ಮಾಡು.''

ಸ್ವಾಮಿ ಯೋಗಾನಂದರು ಈ ಘಟನೆಯನ್ನು ವಿವರಿಸುವಾಗ ಭಾವಾತಿರೇಕದಿಂದ ಅವರ ಧ್ವನಿ ಬಿಗಿದುಕೊಂಡಿತು. ಕೊನೆಗೆ ಅವರು ಹೇಳಿದರು, ''ನನ್ನ ನೆನಪಿನಿಂದ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಆ ಚಿತ್ರ ಎಂದೆಂದಿಗೂ ಅಳಿಸಲಾರದು. ಅವರಿಬ್ಬರೂ ದೈವಾಂಶಸಂಭೂತರೆಂದೂ, ಲಕ್ಷಾಂತರ ಮಂದಿ ಭಕ್ತರ ಮೇಲೆ ಕರುಣೆ ತುಂಬಿ ಅವರು ಮಾನವದೇಹಧಾರಿಗಳಾಗಿ ಅವತರಿಸಿದ್ದಾರೆ ಎಂದೂ ಆಗ ನನಗರ್ಥವಾಯಿತು. ನಮ್ಮ ಒಳಿತಿಗಾಗಿ ಅವರು ಪರಿಶುದ್ಧತೆ, ಪಾವಿತ್ರ್ಯ, ಧರ್ಮ, ನಿಷ್ಕಾಮಕರ್ಮ ಹಾಗೂ ಸತ್ಯವೇ ಮುಂತಾದ ಆದರ್ಶಗಳ ಮಾದರಿಯನ್ನು ಆಚರಿಸಿ ತೋರಿಸಲೆಂದೇ ನಶ್ವರ ಮಾನವರಾದ ನಮ್ಮ ನಡುವೆ ಜನ್ಮವೆತ್ತಿ ಬಂದರು. ದೀನದಲಿತರ, ದುಃಖಿತರ, ಬಡವರ, ಪತಿತರ ಮೇಲೆ ಅವರಿಗಿದ್ದ ಪ್ರೀತಿ, ಮಾನವರ ಬಗ್ಗೆ ಅವರಿಗಿದ್ದ ಕಾಳಜಿ ಅನುಪಮವಾದುದು. ಮಾನವರಲ್ಲಿರುವ ಎಲ್ಲ ಸಂದೇಹ, ನಿರಾಸೆಗಳನ್ನು ಹೋಗಲಾಡಿಸಿ ಅವರ ಹೃದಯವನ್ನು ಶುದ್ಧೀಕರಿಸಲೆಂದೇ ಅವರು ಬಂದರು. ಅಂತೆಯೇ ಶ್ರದ್ಧೆ ಮತ್ತು ಪ್ರೀತಿಯನ್ನು ಅವರಲ್ಲಿ ತುಂಬಿ ಅವರಿಗೆ ಸ್ಫೂರ್ತಿ ನೀಡಲು, ಅವರಿಗೆ ಉನ್ನತ ಆಧ್ಯಾತ್ಮಿಕ ಮೌಲ್ಯಗಳನ್ನು ನೀಡಲು ಬಂದರು. ಪ್ರಪಂಚದಲ್ಲಿ ಸುಖ ದುಃಖಗಳಿಂದ ಪೀಡಿತರಾಗದೆ ಅನಾಸಕ್ತರಾಗಿರಲು, ಫಲಾಪೇಕ್ಷೆಯಿಲ್ಲದೆ ಸ್ವಾರ್ಥಶೂನ್ಯರಾಗಿ ಕೆಲಸ ಮಾಡುವುದನ್ನು ತೋರಿಸಲು ಅವರು ಬಂದರು. ಶ್ರೀಮಾತೆಯವರು ಕೂಡಾ ಶ್ರೀರಾಮಕೃಷ್ಣರಂತೆ ಸರಳವಾದ ಜೀವನವನ್ನು ನಡೆಸುತ್ತಿದ್ದಾರೆ. ಅವರ ಮಾರ್ಗದರ್ಶನ, ಉಪದೇಶದ ಮಾತುಗಳು ಹಾಗೂ ಅವರ ಸಂದೇಶ ತಮ್ಮದೇ ಆಧ್ಯಾತ್ಮಿಕ ಅನುಭವಗಳನ್ನು ಆಧರಿಸಿವೆ; ಅವು ಬೇರೆ ಯಾರಿಂದಲೂ ಎರವಲು ಪಡೆದವುಗಳಲ್ಲ; ಯಾವುದೇ ಪುಸ್ತಕಗಳಿಂದ ಉದ್ಧರಿಸಿದವೂ ಅಲ್ಲ. ಪ್ರಾಪಂಚಿಕತೆಯಿಂದ ಕೂಡಿದ ಸಂಕೀರ್ಣ ನಾಗರಿಕತೆಯ ಹಾಗೂ ಆಧುನಿಕ ಯುಗದ ಸನ್ನಿವೇಶದ ನಡುವೆಯೂ ಪರಿಶುದ್ಧ ಹಾಗೂ ಸರಳ ಜೀವನವನ್ನು ನಡೆಸಬಹುದು ಎಂಬುದನ್ನು ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರು ಜಗತ್ತಿಗೆ ತಾವು ಆಚರಿಸಿ ತೋರಿಸಿಕೊಟ್ಟರು.''

ಜೀವನದ ಬಗ್ಗೆ ಇದು ಹೊಸ ದೃಷ್ಟಿಕೋನ. ಆಧುನಿಕ ಯುಗವೆಂದರೆ ಅದು ವಿಜ್ಞಾನಯುಗ. ಈಗಿನ ನಾಗರಿಕತೆ ವೈಜ್ಞಾನಿಕ ಪರೀಕ್ಷೆ, ತರ್ಕ ಹಾಗೂ ಪ್ರಯೋಗಗಳ ಮೇಲೆ ಆಧರಿಸಲ್ಪಟ್ಟಿದೆ. ದೇಶಗಳು ಹಲವು ರೀತಿ ಒಂದನ್ನೊಂದು ಅವಲಂಬಿಸಿಕೊಂಡಿವೆ. ತನ್ನ ನೆರೆಯ ದೇಶಗಳೊಂದಿಗೆ ಎಲ್ಲ ಸಂಬಂಧಗಳನ್ನೂ ಕಡಿದುಕೊಂಡು ಯಾವ ಒಂದು ದೇಶವೂ ಬದುಕಲಾರದು. ಆದರೆ ವಿವಿಧ ಮನೋಭಾವಗಳ, ವಿವಿಧ ರೀತಿಯ ಜನರನ್ನು ಹಾಗೂ ಅವರ ಪುರಾತನ ಸಂಸ್ಕೃತಿ-ಪರಂಪರೆಗಳೊಂದಿಗೆ ಒಂದಾಗಿಸುವ ಯಾವುದಾದರು ಒಂದು ಸಾಮಾನ್ಯ ಕೊಂಡಿಯಿದೆಯೆ? ಇಂದಿನ ವೈಜ್ಞಾನಿಕ ಯುಗದಲ್ಲೂ ಎಲ್ಲರನ್ನೂ ಒಂದಾಗಿಸುವ, ಎಲ್ಲರಲ್ಲಿ ಏಕತೆ ಹಾಗೂ ಶಾಂತಿಯನ್ನು ನೀಡಬಲ್ಲ ಒಂದು ಕೊಂಡಿಯನ್ನು ಕಾಣಲಾರೆವು. ಸದ್ಯದ ಪರಿಸ್ಥಿತಿಯಲ್ಲಿ ದೇಶಗಳು ಅಧಿಕಾರ ಹಾಗೂ ಮೇಲ್ಮೆಗಾಗಿ ಪೈಪೋಟಿ ಮಾಡುತ್ತಿವೆ. ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರು ಉಪದೇಶಿಸಿದ ಆದರ್ಶಗಳು ಈ ಬಿಕ್ಕಟ್ಟಿನ ಸಮಸ್ಯೆಯನ್ನು ಹೋಗಲಾಡಿಸಬಲ್ಲವು. ಇಂದು ಬೇಕಾಗಿರುವುದು ಸರಳತೆ, ಪ್ರಾಮಾಣಿಕತೆ, ಪರಿಶುದ್ಧವಾದ ಉದ್ದೇಶ, ನಿಸ್ವಾರ್ಥ ಪ್ರೀತಿ ಹಾಗೂ ಇತರ ಒಳಿತಿಗಾಗಿ ಆತ್ಮ ಸಮರ್ಪಣ ಭಾವ. ಕೆಲವರ ಮುನ್ನಡೆ ಹಾಗೂ ಇನ್ನು ಕೆಲವರ ಹಿನ್ನಡೆ ಇದ್ದರೂ ಕೂಡ, ಪ್ರೀತಿಯ ನಿಜವಾದ ಪ್ರಕಟಣೆಯಿಂದ ಅವರನ್ನು ಒಂದುಗೂಡಿಸಬಹುದು. ಏಕತೆ ಮತ್ತು ಪರಸ್ಪರ ತಿಳುವಳಿಕಯನ್ನು ಪೋಷಿಸಲು ಸೇವೆ, ಅನುಕಂಪ ಹಾಗೂ ನಿಜವಾದ ಪ್ರೀತಿ ಬಹಳ ದೀರ್ಘಕಾಲ ಕೆಲಸ ಮಾಡಬೇಕಾಗುವುದು. ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರು ತಮ್ಮ ಜ್ವಲಂತ ಜೀವನದ ಮೂಲಕ ಇಂತಹ ಪ್ರೀತಿ ಮತ್ತು ಭರವಸೆಯ ಸಂದೇಶವನ್ನು ಸಾರಿದರು.

ಶ್ರೀಮಾತೆಯವರು ದೈನಂದಿನ ಕೆಲಸಗಳಲ್ಲಿ ಮತ್ತು ಕೌಟುಂಬಿಕ ಕರ್ತವ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರೂ ಕೂಡ, ಯಾವಾಗಲೂ ಭಗವಚ್ಚಿಂತನೆ, ಧ್ಯಾನಗಳಲ್ಲಿ ಮುಳುಗಿರುತ್ತಿದ್ದರು; ಜೀವನದ ದುಃಖದುಮ್ಮಾನಗಳಿಂದ ಬಾಧೆಗೊಳಗಾಗದೆ ಇರುತ್ತಿದ್ದರು. ನಾನು ಅವರ ದರ್ಶನ ಪಡೆಯಲು ಹೋದಾಗಲೆಲ್ಲ ಅವರು ಅದೇ ಪ್ರೀತಿಯ, ಕೃಪೆಯ ಮೂರ್ತಿಯಾಗಿ ಕಾಣಿಸುತ್ತಿದ್ದರು. ನನ್ನೆದುರು ಅವರು ಶಾಂತಭಾವದಿಂದ ಅನುಕಂಪೆಯ ದೃಷ್ಟಿಯಿಂದ ನಿಂತಿರುತ್ತಿದ್ದರು. ಜಗನ್ಮಾತೆಯ ದಿವ್ಯಪ್ರಭೆ ಸದಾ ಅವರ ಸುತ್ತ ಬೆಳಗುತ್ತಿತ್ತು. ಅವರ ಪವಿತ್ರ ಸಾನ್ನಿಧ್ಯದಲ್ಲಿ ಯಾವ ಭಾವನೆ ಉಂಟಾಗುವುದು ಎಂಬುದನ್ನು ವಿವರಿಸಲು ಮಾತುಗಳು ಬರಿದಾಗುವವು.

ಇಲ್ಲಿ ಒಂದು ಪ್ರಧಾನ ಸಂಗತಿಯನ್ನು ಉಲ್ಲೇಖಿಸುವುದು ಸೂಕ್ತವಾದೀತು. ಕೆಲವೇ ದಿನಗಳಲ್ಲಿ ಸ್ವಾಮೀಜಿ ದಾರ್ಜಿಲಿಂಗಿನಿಂದ ಕಲ್ಕತ್ತೆಗೆ ಮರಳಿ ಬಂದರು. ೧೮೯೭ರ ಮೇ ೧ರಂದು ಶ್ರೀಮಾತೆಯವರ ಆಶೀರ್ವಾದದೊಂದಿಗೆ ರಾಮಕೃಷ್ಣ ಮಿಷನನ್ನು ಉದ್ಘಾಟಿಸುವ ಮೂಲಕ ತಮ್ಮ ವಿಚಾರಗಳಿಗೆ ಒಂದು ಸ್ಪಷ್ಟ ಆಕಾರವನ್ನು ನೀಡಿದರು. ಬಾಗ್‌ಬಜಾರಿನಲ್ಲಿದ್ದ ಬಲರಾಮ ಮಂದಿರದಲ್ಲಿ※ ರಾಮಕೃಷ್ಣ ಮಿಷನ್ನಿನ ಸಭೆ ಪ್ರತಿ ಭಾನುವಾರವೂ ನಡೆಯುತ್ತಿತ್ತು. ಇಂಥ ಸಭೆ ನಡೆದಾಗ ಹಲವಾರು ಸಂದರ್ಭಗಳಲ್ಲಿ ಶ್ರೀಮಾತೆ ತಮ್ಮ ಒಡನಾಡಿ ಮಹಿಳೆಯರು ಹಾಗೂ ಭಕ್ತೆಯರೊಂದಿಗೆ ಅಲ್ಲಿರುತ್ತಿದ್ದರು. ಆಗಾಗ ಸ್ವಾಮೀಜಿಯವರು ಇಂಥ ಸಭೆಗಳಿಗೆ ಆಧ್ಯಕ್ಷತೆ ವಹಿಸುತ್ತಿದ್ದರು. ಅನೇಕವೇಳೆ — ವಿಶೇಷವಾಗಿ ಶ್ರೀಮಾತೆಯವರು ಅಲ್ಲಿದ್ದಾಗ ಸ್ವಾಮೀಜಿ ಹಲವಾರು ಹಾಡುಗಳನ್ನು ಹಾಡುತ್ತಿದ್ದರು.

*(ಮುಂದುವರಿಯುವುದು)*

※ ಶ್ರೀರಾಮಕೃಷ್ಣರ ಪ್ರೀತಿಗೆ ಪಾತ್ರನಾದ ಗೃಹಸ್ಥ ಶಿಷ್ಯ ಬಲರಾಮ ಬಸುವಿನ ಕಲ್ಕತ್ತಾದ ಮನೆ.